**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ನಾಗಮಂಗಲ.**

**ಅಸಲು ದಾವಾ ಸಂಖ್ಯೆ. 103/2019**

**ವಾ.ಸಾ-1**

**ಸಾಕ್ಷಿಗೆ ದಿನಾಂಕಃ 01-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ.ಕೆ.ಬಿ.ಎಸ್ ಪ್ರತಿವಾದಿಯರ ಪರ ವಕೀಲರಿಂದಃ**

1. ನನ್ನ ಊರು ದೊಡ್ಡ ಬೆಂಬತ್ತಿ ಗ್ರಾಮ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ. ನನ್ನ ಹೆಂಡತಿಯ ಊರು ಸಂಪನಹಳ್ಳಿ ಮತ್ತು 1 ನೇ ಪ್ರತಿವಾದಿಯು ಕೂಡ ಅದೇ ಊರಿನವರು, ಆದ್ದರಿಂದ ಪ್ರತಿವಾದಿಯ ಪರಿಚಯ ಇದೆ. ಸಂಪನಹಳ್ಳಿ ಮತ್ತು ಮದ್ದೇನಹಟ್ಟಿ ಅಕ್ಕಪಕ್ಕದ ಊರುಗಳು ಎಂದರೆ ಸರಿ. ನನ್ನ ಮದುವೆಯಾದಾಗಿನಿಂದಲೂ ಒಂದನೇ ಪ್ರತಿವಾದಿಯ ಪರಿಚಯ ಇದೆ.

2. ಬಿ.ಎಂ. ವೇಣುಗೋಪಾಲ ಎಂಬುವವರು ನಮ್ಮ ಸಂಬಂಧಿಕರು. ದಾವಾ ಸ್ವತ್ತಿನ ಸುತ್ತಮುತ್ತ ಸದರಿ ಬಿ.ಎಂ. ವೇಣುಗೋಪಾಲರವರಿಗೆ ಸುಮಾರು 100 ಎಕರೆ ಜಮೀನು ಇದೆ ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ದಾವಾಸ್ವತ್ತಿನ ಪಶ್ಚಿಮಕ್ಕೆ ಸದರಿಯವರ ಜಮೀನು ಇದೆ. ಬಿ.ಎಂ. ವೇಣುಗೋಪಾಲ ರವರು ಸದರಿ ಜಮೀನನ್ನು ಹೇಗೆ ಸಂಪಾದಿಸಿದರು ಎಂದು ನನಗೆ ಗೊತ್ತಿಲ್ಲ. ಸದರಿಯವರ ಹೆಸರಿನಲ್ಲಿರುವ ಜಮೀನು ಮೂಲತಹ ಸರ್ಕಾರದ ದರಕಾಸ್ತು ಜಮೀನು ಎಂದರೆ ನನಗೆ ಗೊತ್ತಿಲ್ಲ.

3. ಬಿ.ಎಂ. ವೇಣುಗೋಪಾಲ ರವರು ರೈತರಿಗೆ ಹಣದ ಆಮಿಷ ತೋರಿಸಿ ಕರಾರು ಪತ್ರ ಮಾಡಿಸಿಕೊಂಡು ನ್ಯಾಯಾಲಯದ ಮುಂದೆ ಖರೀದಿ ಪತ್ರ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೂಲ ಮಾಲೀಕರು 1 ನೇ ಪ್ರತಿವಾದಿ. ಖಾತೆ ಮತ್ತು ಪಹಣಿ ಪತ್ರಿಕೆ ಸದರಿಯವರ ಹೆಸರಿಗೆ ಬರುತ್ತಿದೆ

ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಖಾತೆಯು 2 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದು ನುಡಿಯುವರು. 2 ನೇ ಪ್ರತಿವಾದಿಯ ಹೆಸರಿಗೆ ಖಾತೆಯು ಹೇಗೆ ಬದಲಾವಣೆಯಾಗಿದೆ ಎಂದು ನನಗೆ ಗೊತ್ತಿಲ್ಲ.

4. ದಾವಾ ಆಸ್ತಿಯು ಮೂಲತಹ 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಗೀತಾ ಮತ್ತು ಮಂಜುಳ ಎಂಬ 2 ಜನ ಹೆಣ್ಣು ಮಕ್ಕಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಸುಮಾರು 35 ವರ್ಷದ ಫಲ ಬಿಡುವ ತೆಂಗಿನ ಮರಗಳು ಇವೆ ಎಂದರೆ ಸರಿ. ಸದರಿ ತೆಂಗಿನ ಮರಗಳನ್ನು 1 ನೇ ಪ್ರತಿವಾದಿಯೇ ನೆಟ್ಟು ಬೆಳೆಸಿದ್ದಾರೆ ಎಂದರೆ ಇರಬಹುದು..

5. ದಾವಾ ಸ್ವತ್ತಿನ ಸುತ್ತ ಯಾವುದೇ ತಂತಿ ಬೇಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನಾನುಬವದಲ್ಲಿ ಪ್ರತಿವಾದಿಯರು ಇದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಸುತ್ತ ಯಾವುದೇ ಬೇಲಿ ಇಲ್ಲದಿದ್ದರೂ ಕೂಡ ನಾನು ಬೇಲಿ ಇದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬೇಲಿ ಇದೆ ಎಂದರೆ ಸರಿ. ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

6. ನನಗೆ ಮತ್ತು 1 ನೇ ಪ್ರತಿವಾದಿಯ ನಡುವೆ ಸುಮಾರು 30 ವರ್ಷಗಳಿಂದ ಪರಿಚಯ ಇದೆ ಎಂದರೆ ಸರಿ. ನಾನು ಮತ್ತು ವೇಣುಗೋಪಾಲ ಎಂಬುವವರು ಹಣದ ಲೇವಾದೇವಿ ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತುರ್ತಾಗಿ 2 ವರೆ ಲಕ್ಷದ ಹಣದ ಅವಶ್ಯಕತೆ ಇತ್ತು ಎಂದರೆ ಸರಿಯಲ್ಲ. ಸದರಿಯವರು ನನ್ನ ಬಳಿ ಸಾಲ ಕೇಳಿದ್ದರು ಎಂದರೆ ಸರಿಯಲ್ಲ. ನಾನು ಸಾಲ ಕೊಡಲು ಷರತ್ತು ಗಳನ್ನು ಕೂಡ ಹಾಕಿದ್ದೆ ಎಂದರೆ ಸರಿಯಲ್ಲ.

ಸಾಲದ ಭದ್ರತೆಗಾಗಿ ಕೇವಲ ನಾಮಕಾವಸ್ತೆಯ ಮಾರಾಟದ ಕರಾರು ಪತ್ರವನ್ನು ಬರೆದುಕೊಡಬೇಕು ಎಂದು ಷರತ್ತು ಹಾಕಿದ್ದೆನು ಎಂರೆ ಸರಿಯಲ್ಲ. ಸದರಿ ಕರಾರಿನಲ್ಲಿ ಖಾಲಿ ಛಾಪಾಕಾಗದಕ್ಕೂ ಕೂಡ ಸಹಿ ಮಾಡಕೊಡುಬೇಕು ಎಂದು ಷರತ್ತು ಹಾಕಿದ್ದೆ ಎಂದರೆ ಸರಿಯಲ್ಲ.

7. 1 ನೇ ಪ್ರತಿವಾದಿಗೆ ತುರ್ತಾಗಿ ಹಣದ ಅವಶ್ಯಕತೆ ಇದ್ದುದರಿಂದ ನಾನು ಹೇಳಿದ ಎಲ್ಲಾ ಷರತ್ತಿಗೆ ಒಪ್ಪಿಕೊಂಡು ಕೇವಲ ಸಾಲದ ಭದ್ರತೆಗಾಗಿ 1 ನೇ ಪ್ರತಿವಾದಿಗೆ ಕರಾರು ಪತ್ರವನ್ನು ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಲದ ಹಣಕ್ಕೆ ವರ್ಷಕ್ಕೆ ಶೇಖಡ 12 ರಷ್ಟು ಬಡ್ಡಿ ಕೊಡಬೇಕು ಎಂದು ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಯಾವುದೇ ಸಾಲದ ವ್ಯವಹಾರ ಆಗಿಲ್ಲ ಎಂದು ನುಡಿಯುವರು.

8. ಕರಾರು ಪತ್ರವನ್ನು ನೊಂದಣಿ ಮಾಡಿಸಿಲ್ಲ. ಸಾಕ್ಷಿಯ ಮುಂದುವರೆದು ದಾಖಲಾತಿಗಳು ನೊಂದಣಿಗೆ ಬೇಕಾಗಿದ್ದವು ಮತ್ತು ಅವುಗಳನ್ನು ಪಡೆದ ನಂತರ ನೊಂದಣಿ ಮಾಡಿಸಿಕೊಡುತ್ತೇನೆ ಎಂದು 1 ನೇ ಪ್ರತಿವಾದಿ ಹೇಳಿದ್ದರು ಎಂದು ನುಡಿಯುವರು. ಕರಾರು ಪತ್ರದಡಿಯಲ್ಲಿ ಜಮೀನಿನ ಸ್ವಾಧಿನವನ್ನು ಕೂಡ ಪಡದುಕೊಂಡಿದ್ದೇನೆ ಎಂದು ಬರೆಸಿ ಕೇವಲ ಸಾಲದ ವ್ಯವಹಾರ ಇದ್ದುದರಿಂದ ಕರಾರು ಪತ್ರವನ್ನು ನೊಂದಣಿ ಮಾಡಿಸಿಲ್ಲ ಎಂದರೆ ಸರಿಯಲ್ಲ. ಸಾಲದ ಭದ್ರತೆಯ ಕರಾರು ಪತ್ರವನ್ನು ಕ್ರಯದ ಕರಾರು ಪತ್ರ ಎಂದು ಸೃಷ್ಟಿ ಮಾಡಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

9. ನಮ್ಮ ಮತ್ತು ಪ್ರತಿವಾದಿಯ ನಡುವೆ ಕೇವಲ ಸಾಲದ ವ್ಯವಹಾರವಾಗಿದೆಯೇ ಹೊರತು ಜಮೀನಿನ ಮಾರಾಟದ ವ್ಯವಹಾರ ಆಗಿಲ್ಲ

ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಆಜ್ಞಾ ಪತ್ರಿಕೆ ಬಂದ ನಂತರ ಪ್ರತಿವಾದಿಯರು ನನ್ನ ಬಳಿ ಬಂದು ಸಾಲದ ಹಣವನ್ನು ನನಗೆ ಪಾವತಿಸುತ್ತೇನೆ ಮತ್ತು ಕರಾರು ಪತ್ರವನ್ನು ಹಿಂತಿರುಗಿಸಿ ಎಂದು ಹೇಳಿದ್ದರೂ ಕೂಡ ನಾನು ಒಪ್ಪಲಿಲ್ಲ ಎಂದರೆ ಸರಿಯಲ್ಲ. ಈಗಲೂ ಕೂಡ ಪ್ರತಿವಾದಿಯರು ಪಡೆದುಕೊಂಡಿರುವ ಸಾಲದ ಹಣವನ್ನು ಕೊಡಲು ಸಿದ್ದರಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ಇಲ್ಲ ಎಂದರೆ ನನಗೆ ಗೊತ್ತಿಲ್ಲ.

10. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ 1 ನೇ ಪ್ರತಿವಾದಿಯ ಹೆಣ್ಣು ಮಕ್ಕಳ ಒಪ್ಪಿಗೆಯನ್ನು ಪಡೆಯದೆ ಮಾರಾಟ ಮಾಡುವುದು ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. 2016 ರಲ್ಲಿ ದಾವಾ ಸ್ವತ್ತು 10 ಲಕ್ಷಕ್ಕೂ ಹೆಚ್ಚು ಮಾರುಕಟ್ಟೆ ಬೆಲೆ ಇತ್ತು ಎಂದರೆ ಸರಿಯಲ್ಲ. 10 ಲಕ್ಷ ಮಾರುಕಟ್ಟೆ ಬೆಲೆ ಇದ್ದರೂ ಕೂಡ ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಕೇವಲ 2 ವರೆ ಲಕ್ಷಕ್ಕೆ ಕರಾರು ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

11. ಕರಾರು ಪತ್ರಕ್ಕೆ ವೇಣುಗೋಪಾಲ, ಕೆ.ಕೆ ರಾಮಮೂರ್ತಿ ಮತ್ತು ನಾಗರಾಜು ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ಕೆ.ಕೆ ರಾಮಮೂರ್ತಿ ಎಂಬುವವರು ವೇಣುಗೋಪಾಲ ರವರ ಚಿಕ್ಕಪ್ಪ ಎಂದರೆ ಇರಬಹುದು. ನನ್ನ ಮತ್ತು ಪ್ರತಿವಾದಿಯವರು ಸಾಲದ ವ್ಯವಹಾರಕ್ಕೆ ವೇಣುಗೋಪಾಲ ರವರು ಸೇರಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಯಾವುದೇ ಸಾಲದ ವ್ಯವಹಾರ ನಡೆದಿಲ್ಲ ಎಂದು

**ಅಸಲು ದಾವಾ ಸಂಖ್ಯೆ. 103/2019**
**ವಾ.ಸಾ-1**

ನುಡಿಯುವರು. ನನ್ನ ಮತ್ತು ಪ್ರತಿವಾದಿಯರ ನಡುವೆ ಸಾಲದ ವ್ಯವಹಾರ ನಡೆದಿದ್ದರೂ ಕೂಡ ವೇಣುಗೋಪಾಲ ರವರ ಮಾತನ್ನು ಕೇಳಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸುತ್ತಲೂ ವೇಣುಗೋಪಾಲ ರವರ ಜಮೀನು ಇರುವುದರಿಂದ ದಾವಸ್ವತ್ತನ್ನು ಅವರಿಗೆ ಮಾರಾಟ ಮಾಡುತ್ತೇನೆ ಎಂದು ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ.

12. ನನ್ನ ಸ್ವಂತ ಊರು ಅರಕಲಗೂಡು ತಾಲ್ಲೂಕು ನಾನು ವಾಸವಿರುವುದು ಬೆಂಗಳೂರಿನಲ್ಲಿ ಎಂದರೆ ಸರಿ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.** **ನನ್ನ ಸಮಕ್ಷಮ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.**